# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಜುಲೈ 2020**, ಬೆಂಗಳೂರು, ಸಂಪುಟ 6, ಸಂಚಿಕೆ 3, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 July 2020**, Bengaluru, Vol. 6, No.3, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription :Annual Rs. 30; Life : Rs. 500/-
Published by: Karnataka Vipassana Prachara Samiti Trust.

**ಧಮ್ಮ ಪದಗಳು**

ಖಂತೀ ಪರಮಂ ತಪೋ ತಿತಿಕ್ಖಾ,
ನಿಬ್ಬಾಣಂ ಪರಮಂ ವದಂತಿ ಬುದ್ಧಾ.
ನ ಹಿ ಪಬ್ಬಜಿ ತೋ ಪರೂಪಘಾತೀ,
ಸಮಣೋ ಹೋತಿ ಪರಂ ವಿಹೇಠಯಂತೋ.

ಸಹನೆಯೇ ಪರಮಶ್ರೇಷ್ಠ ತಪಸ್ಸು, ನಿಬ್ಬಾಣವು ಅತ್ಯಂತ
ಶ್ರೇಷ್ಠವಾದದ್ದು ಎಂದು ಬುದ್ಧರು ಹೇಳುತ್ತಾರೆ. ಪರರನ್ನು
ಪೀಡಿಸುವವನು ಪರಿತ್ಯಾಗಿ ಅಲ್ಲ,
ಇತರರನ್ನು ಪೀಡಿಸುವವನು ಸನ್ಯಾಸಿಯಲ್ಲ.

**ಧಮ್ಮಪದ–165, ಅತ್ತವಗ್ಗೋ**

## ಧಮ್ಮವು ಮರಳಿದ ಮತ್ತು ಹರಡಿದ ಸುವರ್ಣ ಮಹೋತ್ಸವ ವರ್ಷ : ನಮ್ಮ ಆಚಾರ್ಯರಾದ ಶ್ರೀ ಗೋಯಂಕಾಜಿಯವರಿಗೆ ಕೃತಜ್ಞತೆಗಳನ್ನು ಅರ್ಪಿಸಲು ಒಂದು ಅದ್ಭುತ ಸಂದರ್ಭ.

**(ಮೇ 2019ರ ಇಂಗ್ಲಿಷ್ 'ವಿಪಶ್ಯನ ವಾರ್ತಾಪತ್ರ'ದಿಂದ ಅನುವಾದಿಸಲಾಗಿದೆ.)**

ಜಗತ್ಪ್ರಸಿದ್ಧ ವಿಪಶ್ಯನ ಆಚಾರ್ಯರಾದ ಶ್ರೀ ಸತ್ಯನಾರಾಯಣ ಗೋಯಂಕರವರು ಪರಿಶುದ್ಧ ಧರ್ಮದ ಮಾರ್ಗಕ್ಕೆ ಬರುವ ಮುಂಚಿನ ಅವರ ವ್ಯಕ್ತಿ ಚಿತ್ರವನ್ನು ಇಲ್ಲಿ ಕೊಡಲಾಗಿದೆ. ಬಹಳ ಚಿಕ್ಕ ವಯಸ್ಸಿನಿಂದಲೇ ಭಕ್ತಿಯ ಭಾವ ತೀವ್ರತೆಯಲ್ಲಿ ಮುಳುಗಿದ್ದ ವ್ಯಕ್ತಿಯು ಹೇಗೆ ಬದಲಾದರು ಎಂಬುದು ಇತರರಿಗೂ ಪ್ರೇರಣೆ ನೀಡಬಹುದು ಎಂಬುದೇ ಇದರ ಉದ್ದೇಶ. ಈ ಮಾಲಿಕೆಯನ್ನು ಅವರ ಆತ್ಮಕಥನದಿಂದ ಕೊಡುತ್ತಿದ್ದೇವೆ.

**ಭಾಗ–9**

### ನನ್ನ ಜೀವನದ ಮೇಲೆ ಸ್ವಾಮಿ ವಿವೇಕಾನಂದರ ಗಾಢವಾದ ಪ್ರಭಾವ

19ನೇ ಶತಮಾನದ ಕೊನೆಯ ಭಾಗದಲ್ಲಿ ಮತ್ತು 20ನೇ ಶತಮಾನದ ಆದಿಭಾಗದಲ್ಲಿ ಇದ್ದ ಭಾರತದ ಮಹಾನ್ ಆಧ್ಯಾತ್ಮಿಕ ನಾಯಕರಾಗಿದ್ದ ಸ್ವಾಮಿ ವಿವೇಕಾನಂದರ ಬಗೆಗೆ ಯಾವಾಗಲೂ ನನಗೆ ಒಲವಿತ್ತು. ಶ್ರೀ ರಾಮಕೃಷ್ಣ ಮಿಷನ್ ಸೊಸೈಟಿ ಮತ್ತು ಶ್ರೀ ರಾಮಕೃಷ್ಣ ಮಿಷನ್ ಸೇವಾಶ್ರಮ ಎಂಬ ದತ್ತಿ ಸಂಸ್ಥೆಗಳನ್ನು ಸ್ವಾಮೀಜಿಯವರು ಅವರ ಗುರುಗಳಾದ ಶ್ರೀ ರಾಮಕೃಷ್ಣ ಪರಮಹಂಸರ ಹೆಸರಿನಲ್ಲಿ ಸ್ಥಾಪಿಸಿದ್ದರು.

ಈ ಸಂಸ್ಥೆಗಳಲ್ಲಿ ನಾನು ಸೇವೆ ಮಾಡುತ್ತಿರುವಾಗ, ಸತ್ಯವಂತರು, ಕರುಣಾಮಯಿಗಳು ಆದ ಸಹೃದಯ ವಿದ್ವಾಂಸರು ಮತ್ತು ಆಶ್ರಮದಲ್ಲಿದ್ದ ಪರಿತ್ಯಕ್ತರ ಜೊತೆ ಒಡನಾಡುವ, ಕೆಲಸ ಮಾಡುವ ಮತ್ತು ಅವರಿಂದ ಪ್ರಯೋಜನ ಪಡೆಯುವ ಅದ್ವಿತೀಯವಾದ ಅದೃಷ್ಟ ನನ್ನದಾಗಿತ್ತು. ಅವರಿಂದ ನಾನು ವಿವೇಕಾನಂದರ ಪ್ರಬಲವಾದ ಮತ್ತು ಆಕರ್ಷಕವಾದ, ಇತರರಿಗೆ ಒಪ್ಪಿಗೆಯಾದ ಗುಣಗಳ ಬಗ್ಗೆ ಮತ್ತು ಅವರ ಹೃದಯಸ್ಪರ್ಶಿ ಕೆಲಸಗಳ ಬಗ್ಗೆ ಕಲಿತೆ. ಇವು ನನಗೆ ಗಾಢ ಸ್ಫೂರ್ತಿಯ ಸೆಲೆಯಾದವು.

ಕೆಲವು ವರ್ಷಗಳ ಹಿಂದೆ, ದಕ್ಷಿಣ ಭಾರತದಲ್ಲಿ ಒಂದು ವಿಪಶ್ಯನ ಶಿಬಿರವನ್ನು ಸಂಯೋಜಿಸುತ್ತಿರುವಾಗ, ನನ್ನ ಕುಟುಂಬ ಸದಸ್ಯರೊಂದಿಗೆ ಕನ್ಯಾಕುಮಾರಿಗೆ ಯಾತ್ರೆಗೆ ಹೋದೆ. ಮೂರು ಸಮುದ್ರಗಳು ಸಂಧಿಸಿ, ಭಾರತ ಮಾತೆಯ ಪಾದ ತೊಳೆಯುತ್ತಿವೆಯೇನೋ ಎಂಬಂತೆ ದೇಶದ ದಕ್ಷಿಣದ ತುದಿಗೆ ನೀರೆರಚುವ ಸ್ಥಳ ಇದು.

ಬೋಧಿಸತ್ವರು ಬುದ್ಧ ಆಗುವ ರಾತ್ರಿಯ ಹಿಂದಿನ ದಿನದ ರಾತ್ರಿ ಅವರ ಕನಸಿನಲ್ಲಿ ಕಂಡ ಸ್ಥಳವು ಇದೇ. ಅಲ್ಲಿ ಅವರು ತಮ್ಮನ್ನು ಒಬ್ಬ ಬೃಹದಾಕಾರದ ಬುದ್ಧನನ್ನಾಗಿ ಕಂಡರು. ಅವರು ಮಲಗಿದ್ದಂತೆ, ಅವರ ಶರೀರವು ಭಾರತದ ತುಂಬಾ ಹರಡಿದಂತೆ, ತಲೆಯು ಉತ್ತರದ ಅತ್ಯಂತ ಎತ್ತರದ ಹಿಮಾಲಯ ಪರ್ವತದ ಮೇಲಿದ್ದರೆ, ಅವರ ಪಾದಗಳು ದಕ್ಷಿಣದ ಕೊನೆಯಲ್ಲಿರುವ ಕನ್ಯಾ ಕುಮಾರಿಯವರೆಗೆ ಚಾಚಿಕೊಂಡು ಈ ಮೂರು ಸಮುದ್ರಗಳ ಅದೃಷ್ಟವಂತ ಅಲೆಗಳು ಅವರ ಪಾದಗಳನ್ನು ತೊಳೆಯುತ್ತಿರುವುದನ್ನು ಕಂಡರು. ಇನ್ನೂ ಮುಂದುವರೆದು, ಅವರ ಒಂದು ಕೈ ಪೂರ್ವದ ಬಂಗಾಳಕೊಲ್ಲಿಯವರೆಗೆ, ಮತ್ತೊಂದು ಕೈ ಪಶ್ಚಿಮದ ಅರಬ್ಬೀ ಸಮುದ್ರದವರೆಗೆ ಚಾಚಿಕೊಂಡಂತೆ, ನೀರಿನ ಅಲೆಗಳು ಆನಂದದಿಂದ ಅವರ ಕೈಗಳಿಗೆ ನೀರೆರಚುತ್ತಿರುವುದನ್ನು ಭವಿಷ್ಯದ ಬುದ್ಧ ತಮ್ಮ ಕನಸಿನಲ್ಲಿ ಕಂಡರು. ಪವಿತ್ರವಾದ ಮತ್ತು ಪ್ರಯೋಜನಕಾರಿಯಾದ ಬುದ್ಧರ ಬೋಧನೆಗಳನ್ನು ಭಾರತದ ಜನರು ತೆರೆದ ಕೈಗಳಿಂದ ಸ್ವೀಕರಿಸುತ್ತಾರೆ ಮತ್ತು ಅವು ಭಾರತದಲ್ಲಿ ಮಾತ್ರವಲ್ಲ, ಉತ್ತರದಲ್ಲಿ ಹಿಮಾಲಯದಿಂದ ಆಚೆಗೂ ಮತ್ತು ಭಾರತದ ಪೂರ್ವ ಮತ್ತು ಪಶ್ಚಿಮದ ಕಡಲ ತೀರಗಳಿಂದಾಚೆಗೂ ಹರಡುತ್ತವೆ ಎಂಬುದರ ಒಂದು ದೈವೀ ಸಂಕೇತ ಇದಾಗಿತ್ತು.

ಇದೇ ಜಾಗದಿಂದಲೇ ಸ್ವಾಮಿ ವಿವೇಕಾನಂದರು ಬಂಡೆಗಲ್ಲಿನ ಚಿಕ್ಕ ನಡುಗಡ್ಡೆಗೆ ಈಜಿ ಮೂರು ದಿನ ಆಳವಾದ ಧ್ಯಾನದಲ್ಲಿ ಕುಳಿತದ್ದು. ಮೂರು ಸಮುದ್ರಗಳು ಸೇರುವ ಈ ಪವಿತ್ರ ಸ್ಥಳದ ಬಗ್ಗೆ ಮಹತ್ವದ ಆಧ್ಯಾತ್ಮಿಕ ಭಾವನೆ ಮತ್ತು ದಿವ್ಯ ಆಕರ್ಷಣೆಯನ್ನು ಹೊಂದುವುದು ಒಬ್ಬ ಭಾರತೀಯನಿಗೆ ವಿಶೇಷವಾದುದೇನಲ್ಲ.

ಭಾರತದ ಅತ್ಯಂತ ದಕ್ಷಿಣದ ತುದಿಯ ಈ ಸಮುದ್ರ ತೀರದಲ್ಲಿ ಕುಳಿತುಕೊಂಡು, ಸಮುದ್ರಗಳು ಒಂದರೊಡನೊಂದು ಲೀನವಾಗುವ ಮೋಹಕವಾದ, ಮಿರುಗುವ ಆಟವನ್ನು, ಅವುಗಳ ಅಲೆಗಳು ರಭಸದಿಂದ ದಡಕ್ಕೆ ಅಪ್ಪಳಿಸುವುದನ್ನು ನೋಡುವುದು ಆಹ್ಲಾದಕರವಾಗಿತ್ತು. ಈ ಪರಮಾನಂದಕರವಾದ ಕ್ಷಣವನ್ನು ನಾವು ಅನುಭವಿಸುತ್ತಾ ಕುಳಿತಿರುವಾಗ, ಕೆಲವು ಯುವಕರು ನಮ್ಮ ಕಡೆಗೆ ಬರುತ್ತಿರುವುದನ್ನು ನಾನು ಕಂಡೆ. ಅವರು ಮುಗುಳುನಗುತ್ತಾ, ತಮ್ಮನ್ನು ತಾವು ಸ್ಥಳೀಯ ವಿವೇಕಾನಂದ ಕೇಂದ್ರದ ಸದಸ್ಯರೆಂದು ಪರಿಚಯಿಸಿಕೊಂಡರು. ನಾವು ಅಲ್ಲಿಗೆ ಭೇಟಿ ಕೊಡುತ್ತಿರುವ ವಿಷಯ ಅವರಿಗೆ ಮುಂಚಿತವಾಗಿ ತಿಳಿದಿರಲಿಲ್ಲ. ಆದರೆ ಅವರಲ್ಲಿ ಕೆಲವರು ವಿಪಶ್ಯನ ಶಿಬಿರಗಳಲ್ಲಿ ಭಾಗವಹಿಸಿದ್ದರಿಂದ ನನ್ನನ್ನು ಗುರುತಿಸಿದರು. ಈ ಅಪರಿಚಿತ ಸ್ಥಳದಲ್ಲಿ, ಪ್ರೀತಿ ಮತ್ತು ಆದರದಿಂದ ಅವರು ನಮ್ಮ ಮಾರ್ಗದರ್ಶಕರಾಗಿ ನಮ್ಮ ಯಾತ್ರೆಯನ್ನು ಬಹಳ ಸುಖಕರವಾಗಿ ಮತ್ತು

ಸ್ಮರಣೀಯವಾಗಿ ಮಾಡಿದರು. ಈ ಪವಿತ್ರವಾದ ಸ್ಥಳದಲ್ಲಿ ಅವರ ಅನಿರೀಕ್ಷಿತ ಸಹಾಯಕ್ಕಾಗಿ ನಾವು ನಿಜವಾಗಿಯೂ ಚಿರಋಣಿಗಳಾದೆವು.

ಮೊದಲು ಅವರು ನಮ್ಮನ್ನು ದೋಣಿಯಲ್ಲಿ ವಿವೇಕಾನಂದರು ಈಜಿ ತಲುಪಿದ್ದ ಬಂಡೆಯ ನಡುಗಡ್ಡೆ, 'ವಿವೇಕಾನಂದ ರಾಕ್' ಗೆ ನಮ್ಮನ್ನು ಕರೆದೊಯ್ದು ಅಲ್ಲಿನ ಭವ್ಯವಾದ, ಕಲಾತ್ಮಕವಾಗಿ ಕೆತ್ತಿದ್ದ ದೇವಾಲಯವನ್ನು ತೋರಿಸಿದರು. ವಿವೇಕಾನಂದರು ಮೂರು ದಿನಗಳ ಕಾಲ ಕುಳಿತು ಧ್ಯಾನ ಮಾಡಿದ್ದರು ಎಂದು ಹೇಳಲಾಗುವ ಜಾಗಕ್ಕೆ ನಾವು ಹೋದೆವು. ನಾವು ಸಹ ಆ ಪವಿತ್ರ ಸ್ಥಳದಲ್ಲಿ ಕೆಲವು ಗಂಟೆಗಳ ಕಾಲ ಧ್ಯಾನದ ಆನಂದದಲ್ಲಿ ಕುಳಿತೆವು.

ಆಳವಾದ ಧ್ಯಾನದಲ್ಲಿ ಮುಳುಗಿದ್ದಾಗ, ಶಕ್ತಿಯುತವಾದ ಮತ್ತು ತೀವ್ರವಾದ ಗಾಢ ಧಮ್ಮ ಆಕಾಂಕ್ಷೆಯೊಂದು ನನ್ನಲ್ಲಿ ಉದಯವಾಯಿತು. ಪುರಾತನ ಕಾಲದಲ್ಲಿ, ಧೈರ್ಯವಂತ ಮತ್ತು ತ್ಯಾಗಮಯಿಗಳಾದ ಭಿಕ್ಖುಗಳು ಧಮ್ಮ ಸಂದೇಶವನ್ನು ಈ ಮೂರು ಸಮುದ್ರಗಳ ಅಲೆಗಳ ಮೇಲೆ ದೂರದ ದೇಶಗಳಿಗೆ ಕೊಂಡೊಯ್ದರು. ತದನಂತರ ಬಹಳ ಇತ್ತೀಚಿನ ಕಾಲದಲ್ಲಿ ವಿವೇಕಾನಂದರು ಮತ್ತೊಂದು ಮಹತ್ವದ ಆಧ್ಯಾತ್ಮಿಕ ತತ್ತ್ವಚಿಂತನಾ ಧಾರೆಯನ್ನು ದೂರದ ದೇಶಗಳಿಗೆ ತೆಗೆದುಕೊಂಡು ಹೋದರು. ಅದೇ ರೀತಿಯಾಗಿ, ಸಾರ್ವತ್ರಿಕವಾಗಿ ಪ್ರಯೋಜನಕಾರಿಯಾದ ಮತ್ತು ಶಕ್ತಿಯುತವಾದ ವಿಪಶ್ಯನ ಜ್ಞಾನವು ಈ ಮೂರು ಸಮುದ್ರಗಳಿಂದಾಚೆಗೆ ತಲುಪಬೇಕು. ಅಲ್ಲಿ ಅದು, ತನ್ನ ಅಮೃತದಿಂದ, ನಜ್ಜುಗುಜ್ಜು ಮಾಡುವ ದುಃಖದ ಭಾರದಿಂದ ಬಿಡುಗಡೆ ಬಯಸುವವರ ದಾಹವನ್ನು ನೀಗಿಸಬೇಕು ಎಂಬ ಬಯಕೆ ನನ್ನಲ್ಲಿ ಉದಯವಾಯಿತು.

ಮತ್ತೊಮ್ಮೆ, ಬುದ್ಧರ ಬೋಧನೆಯ ಎರಡನೆಯ ಅವಧಿಯಲ್ಲಿ ಈ ಪವಿತ್ರ ಭಾರತ ಭೂಮಿಯು ಖಂಡಿತವಾಗಿ ವಿಶ್ವಕ್ಕೆ ಹೆಮ್ಮೆಯ ಮಾರ್ಗದಾತನಾಗುತ್ತದೆ. ನಿರಂತರವಾಗಿ ತಿರುಗುವ ಹುಟ್ಟು ಸಾವಿನ ಚಕ್ರದಿಂದ ಬಿಡುಗಡೆ ಹೊಂದುವ ದಾರಿಯನ್ನು ವಿಶ್ವದ ಜನರಿಗೆ ತೋರಿಸುತ್ತದೆ.

ದಕ್ಷಿಣದಿಂದ ಇನ್ನೂ ಸ್ವಲ್ಪ ಮುಂದಕ್ಕೆ, ನೀರಿನಲ್ಲಿ ಸುಖವಾಗಿ ನೆಲೆಸಿರುವ ಕಮಲದಂತೆ, ಧಮ್ಮ ದ್ವೀಪವಾದ ಶ್ರೀಲಂಕಾ ಇದೆ. ಆ ಕಡೆ, ಪೂರ್ವತೀರಕ್ಕೆ ಹತ್ತಿರವಾಗಿ ನನ್ನ ಪವಿತ್ರ ಜನ್ಮಭೂಮಿ, ಬರ್ಮಾ (ಮ್ಯಾನ್ಮಾರ್) ಇದೆ. ಈ "ದೇಶಗಳು, ಜೊತೆಗೆ ಏಷಿಯಾದ ಇತರೆ ಬೌದ್ಧ ದೇಶಗಳು, ಧರ್ಮವನ್ನು ಹರಡುವ ಈ ಬೃಹತ್ಕಾರ್ಯದಲ್ಲಿ ಕೊಡುಗೆ ನೀಡಿ ಅಗಣಿತ ಪುಣ್ಯಗಳಿಸಲಿ" ಎಂಬ ಆಲೋಚನೆ ನನ್ನಲ್ಲಿ ಬಂತು. ಧರ್ಮದ ಇಂತಹ ಭಾವನೆಗಳನ್ನು ಹೊಂದಿ ದೂರದ ದಕ್ಷಿಣದ ನಮ್ಮ ಯಾತ್ರೆಯನ್ನು ನಾವು ಸಂತೋಷದಿಂದ ಮುಕ್ತಾಯಗೊಳಿಸಿದೆವು.

ವಿವೇಕಾನಂದರು ತಮ್ಮ ಕೊನೆಯ ಕೆಲವು ದಿನಗಳನ್ನು ಬೋಧಗಯಾದ ಬೋಧಿವೃಕ್ಷದ ಕೆಳಗೆ ಧ್ಯಾನ ಮಾಡುತ್ತಾ ಕಳೆದಿದ್ದರು ಎಂಬುದನ್ನು ತಿಳಿದು ಸಂತೋಷಾಶ್ಚರ್ಯವಾಯಿತು. ಈ ನಡುಗಡ್ಡೆಯ ಮೇಲೆ ಅಥವಾ ಬೋಧಿವೃಕ್ಷದ ಕೆಳಗೆ ಅವರು ಯಾವ ಬಗೆಯ ಧ್ಯಾನವನ್ನು ಅಭ್ಯಾಸ ಮಾಡಿದರೆಂಬುದು ನಮಗೆ ಗೊತ್ತಿಲ್ಲ. ಆದರೆ ಸ್ಪಷ್ಟವಾಗಿ ಅದು ವಿಪಶ್ಯನವಲ್ಲ. ಏಕೆಂದರೆ ಅದು ಆಗ ಇನ್ನೂ ತನ್ನ ಮೂಲಸ್ಥಾನಕ್ಕೆ ಹಿಂದಿರುಗಿರಲಿಲ್ಲ. ಭಾರತ ಭೂಮಿಯು ಆಗ ತನ್ನ ಅಮೂಲ್ಯವಾದ ಪರಂಪರಾಗತ ಸ್ವತ್ತನ್ನು ಮರೆತಿತ್ತು.

ವಿವೇಕಾನಂದರಂತಹ ಪ್ರಭಾವಶಾಲಿಯಾದ ಮತ್ತು ಅಸಾಧಾರಣ ಮೇಧಾವಿಯಾದ ಒಬ್ಬ ಸಂತ ವ್ಯಕ್ತಿಯು ವಿಪಶ್ಯನದ ಮತ್ತು ಬುದ್ಧರ ಮೂಲ ಬೋಧನೆಗಳ ಸಂಪರ್ಕಕ್ಕೆ ಬಂದಿದ್ದರೆ, ಪರಿಣಾಮಗಳು ಅಭೂತಪೂರ್ವವಾಗಿರುತ್ತಿದ್ದವು. ಬುದ್ಧರ ಬಗೆಗೆ ಅವರಿಗಿದ್ದ ಅಗಾಧವಾದ ಪೂಜ್ಯಭಾವನೆಯು ಸುಲಭವಾಗಿ ಬುದ್ಧರ ಬೋಧನೆಗಳಿಗೆ ಪರಿವರ್ತಿತವಾಗುತ್ತಿತ್ತು. ಶತಮಾನಗಳ ಕಾಲ ಭಾರತವನ್ನು ಕಲೆ ಮಾಡಿದ ದುರದೃಷ್ಟಕರ ನಂಬಿಕೆಗಳ ಕಾರಣದಿಂದ ವಿವೇಕಾನಂದರ ಮನಸ್ಸನ್ನು ಮಲಿನಗೊಳಿಸಿರಬಹುದಾದ ತಪ್ಪು ಅಭಿಪ್ರಾಯಗಳು ಸಂದೇಹವಿಲ್ಲದಂತೆ ನಿವಾರಣೆಯಾಗುತ್ತಿದ್ದವು. ಅಂತಹ ಸನ್ನಿವೇಶದಲ್ಲಿ, ಅವರು ವಿಶ್ವಕ್ಕೆ ಕೊಟ್ಟ ಆಧ್ಯಾತ್ಮದ ಕೊಡುಗೆಯು ಗಣನೀಯವಾಗಿ ದ್ವಿಗುಣವಾಗುತ್ತಿತ್ತು. ಆದರೆ ನಿಸ್ಸಂದೇಹವಾಗಿ, ವಿಪಶ್ಯನದ ಜೊತೆಗೆ ಬುದ್ಧರ ಮೂಲಭೂತ ಬೋಧನೆಗಳು ತನ್ನ ಸಮಯಕ್ಕೆ ಮುಂಚೆಯೇ ಭಾರತಕ್ಕೆ ಬರುವ ಸಾಧ್ಯತೆ ಇರಲಿಲ್ಲ.

ಬುದ್ಧರ ಬೋಧನೆಗಳು ಮತ್ತು ವಿಪಶ್ಯನದ ಧ್ಯಾನದ ಅಭ್ಯಾಸ, ಈ ಎರಡೂ 2500 ವರ್ಷಗಳ ಕೊನೆಗೆ ಭಾರತಕ್ಕೆ ಮರಳುತ್ತವೆ ಎಂದು ಪುರಾತನ ಭಾರತದ ಬಹಳ ವಿಕಸಿತರಾದ ಸಂತರೊಬ್ಬರು ಭವಿಷ್ಯ ನುಡಿದಿದ್ದರು ಮತ್ತು ನಿಜವಾಗಿಯೂ ಅವೆರಡೂ ಹಿಂತಿರುಗಿದ್ದು ಅವಾಗಲೇ. ಆದಾಗ್ಯೂ ಅತ್ಯಂತ ಗೌರವಾನ್ವಿತ ವಿವೇಕಾನಂದರು ಬುದ್ಧರ ವ್ಯಕ್ತಿತ್ವದ ಬಗ್ಗೆ ವ್ಯಕ್ತಪಡಿಸಿದ ಪೂಜ್ಯಭಾವನೆಯು, ನನ್ನ ಹೃದಯದಲ್ಲಿದ್ದ ಬುದ್ಧರ ಬಗೆಗಿನ ಪೂಜ್ಯಭಾವನೆಯನ್ನು ಹೆಚ್ಚು ಮಾಡಲು ಸಹಾಯ ಮಾಡಿತು. ಅದಕ್ಕಾಗಿ ನಾನು ಅವರಿಗೆ ಅಪರಿಮಿತವಾಗಿ ಕೃತಜ್ಞನಾದೆ.

**ಬುದ್ಧರ ಹಿರಿಮೆ**

ಈ ಮುಂದಿನ ಮಾತುಗಳು, ಬುದ್ಧರ ಬಗೆಗಿನ ವಿವೇಕಾನಂದರ ಹೃದಯಸ್ಪರ್ಶಿ ಭಾವನೆಗಳನ್ನು ಪ್ರತಿಬಿಂಬಿಸುತ್ತವೆ. ನನ್ನ ಬಾಲ್ಯಾವಸ್ಥೆಯಿಂದ ಬದ್ಧರ ಬಗೆಗೆ ನಾನು ಹೊಂದಿದ್ದ ಗೌರವ ಭಾವನೆಯನ್ನು ಇವು ಅರಳಿಸಿದವು ಮತ್ತು ಬುದ್ಧರ ಬಗೆಗೆ ನನ್ನಲ್ಲಿದ್ದ ಶ್ರದ್ಧೆ ಮತ್ತು ಭಕ್ತಿಯನ್ನು ಹೆಚ್ಚಿಸಿದವು.

"ನಿಷ್ಕಳಂಕ, ಪರಿಶುದ್ಧ ನಡತೆಯ ಉತ್ಕೃಷ್ಟತೆಯ ಬಗ್ಗೆ ಹೇಳುವುದಾದರೆ, ಜಗತ್ತಿನಲ್ಲಿ ಬುದ್ಧರು ಪ್ರಶ್ನಾತೀತ ವ್ಯಕ್ತಿಯಾಗಿದ್ದರು."

"ನೈತಿಕತೆಯ ಬಗ್ಗೆ ಪ್ರಾಮಾಣಿಕವಾಗಿ, ನೇರವಾಗಿ ಮಾತನಾಡಿದ ಅತ್ಯಂತ ನಿರ್ಭೀತ ವ್ಯಕ್ತಿ."

"ಧೈರ್ಯ, ನಿರ್ಭೀತಿ ಮತ್ತು ಅಪರಿಮಿತ ಪ್ರೀತಿಯಿಂದ ತುಂಬಿದ್ದ ಈ ವ್ಯಕ್ತಿಗೆ ನನ್ನ ಅತ್ಯಂತ ಆಳವಾದ ಪವಿತ್ರ ಭಾವನೆಯು ಮೀಸಲಾಗಿದೆ".

"ಅಗಾಧವಾದ ಮಾನಸಿಕ ತಜ್ಞತೆ, ಸರಿಸಾಟಿಯಿಲ್ಲದ ಶಕ್ತಿ ಮತ್ತು ಮಿತಿಯಿಲ್ಲದ ಆಕಾಶದಂತಹ ವಿಶಾಲವಾದ ಹೃದಯವನ್ನು ಬುದ್ಧ ಹೊಂದಿದ್ದರು".

"ಅವರು ಹೊಂದಿದ್ದ ಹೃದಯ ವೈಶಾಲ್ಯತೆಯಲ್ಲಿ ಕಿಂಚಿತ್ ಭಾಗವನ್ನು ನಾನು ಹೊಂದಿದ್ದರೂ, ನಾನೇ ಪುಣ್ಯಶಾಲಿ ಎಂದು ನನ್ನನ್ನು ನಾನು ಪರಿಗಣಿಸುತ್ತಿದ್ದೆ".

"ಸಕಲ ಭೋಗ-ಭಾಗ್ಯಗಳಿಂದ ಕೂಡಿದ್ದ, ವೈಭವೋಪೇತವಾದ ಸಾಮ್ರಾಜ್ಯವನ್ನು ತ್ಯಾಗ ಮಾಡಿ, ಆರ್ಯಾವರ್ತದ (ಪುರಾತನ ಭಾರತದ ಹೆಸರು) ಬೀದಿ ಬೀದಿಗಳಲ್ಲಿ ಅಲೆದಾಡುತ್ತಾ, ಭಿಕ್ಷೆ ಬೇಡಿ ಜೀವಿಸುತ್ತಾ, ಸಾಗರದಷ್ಟು ವಿಶಾಲ ಹೃದಯದ ಈ ರಾಜಕುಮಾರ, ಪುರುಷರ ಮತ್ತು ಮಹಿಳೆಯರ, ವಾಸ್ತವವಾಗಿ ಅತ್ಯಂತ ಚಿಕ್ಕ ಜೀವಿಯನ್ನೂ ಒಳಗೊಂಡು ಎಲ್ಲಾ ಜೀವಿಗಳ ಕಲ್ಯಾಣಕ್ಕಾಗಿ ತನ್ನ ಜೀವನವನ್ನು ಮುಡುಪಾಗಿಟ್ಟರು."

"ಆಚರಣೆಯಲ್ಲಿ ನಿಸ್ವಾರ್ಥಿ, ಅವರ ಕೆಲಸಗಳಿಗೆ ಯಾವುದೇ ಫಲಾಪೇಕ್ಷೆಯಿಲ್ಲದ ವ್ಯಕ್ತಿ ಎಂದು ನಿಜವಾಗಿಯೂ ಬುದ್ಧರನ್ನು ಮಾತ್ರ ಕರೆಯಬಹುದು".

"ಪ್ರತಿಫಲಾಪೇಕ್ಷೆ ಇಲ್ಲದೆ ಅವರು ಕೆಲಸ ಮಾಡಿದರು. ಹಾಗಾಗಿ ಕರ್ಮ ಯೋಗಿಯ ಆದರ್ಶಪ್ರಾಯ ಉದಾಹರಣೆಯಾದರು."

"ನಿಸ್ವಾರ್ಥ ಸೇವೆ ಮತ್ತು ಫಲಾಪೇಕ್ಷೆಯಿಲ್ಲದ ಕೆಲಸ ಮಾತ್ರ ವ್ಯಕ್ತಿಯನ್ನು ಅಂತಿಮ ಸತ್ಯಕ್ಕೆ ಕೊಂಡೊಯ್ಯುತ್ತದೆ".

"ತಪ್ಪು ಭಾವಾತಿರೇಕಕ್ಕೆ ಸ್ಥಳವಿಲ್ಲದ ಆ ಅದ್ಭುತ ಮನಸ್ಸಿನ ಬಗ್ಗೆ ಸುಮ್ಮನೆ ಯೋಚಿಸಿ. ಈ ಅದ್ಭುತವಾದ ಮನಸ್ಸಿಗೆ ಅಂಧಶ್ರದ್ಧೆಯು ಯಾವಾಗಲೂ ಗೊತ್ತಿರಲಿಲ್ಲ."

"ದೇವರುಗಳ ಬಗ್ಗೆ ಪ್ರಚಲಿತವಿದ್ದ ಎಲ್ಲಾ ನಂಬಿಕೆಗಳನ್ನು, ಮಡಿ-ಮೈಲಿಗೆಗಳ ನಂಬಿಕೆಗಳನ್ನು ಅವರು ಮುರಿದುಹಾಕಿದರು".

"ತಮ್ಮನ್ನು ತಾವೇ ದೇವರುಗಳ ಅವತಾರವೆಂದು ಕರೆದುಕೊಂಡು, ನಮ್ಮಲ್ಲಿ ನಂಬಿಕೆ ಇಡುವವರು ಸ್ವರ್ಗಕ್ಕೆ ಹೋಗುತ್ತಾರೆ ಎಂದು ಜನರಿಗೆ ಹೇಳುತ್ತಿದ್ದ

ಅನೇಕ ಜನರಿದ್ದರು. ಆದರೆ, ಕೊನೆಯವರೆಗೆ ಬುದ್ಧರ ಬಾಯಿಯಿಂದ ಹೊರಬಂದ ಮಾತುಗಳೆಂದರೆ, 'ನಿಮ್ಮ ಪ್ರಗತಿಯು ನಿಮ್ಮ ಪ್ರಯತ್ನಗಳನ್ನು ಅವಲಂಬಿಸಿದೆ. ಇತರರು ನಿಮಗಾಗಿ ಅದನ್ನು ಮಾಡಲು ಸಾಧ್ಯವಿಲ್ಲ. ನಿಮ್ಮ ಮುಕ್ತಿಗಾಗಿ ನೀವು ಕೆಲಸ ಮಾಡಿ".

"ಜಗತ್ತಿನ ಎಲ್ಲಾ ಬೋಧಕರಲ್ಲಿ, 'ನೀವು ಸ್ವಾವಲಂಬಿಗಳಾಗಿ' ಎಂದು ಅವಿಶ್ರಾಂತವಾಗಿ ಮಾತಾಡಿದವರು ಇವರೊಬ್ಬರೆ. ಮೂಢನಂಬಿಕೆಗಳ ಬಂಧನದಿಂದಷ್ಟೇ ಮಾತ್ರ ಇವರು ನಮ್ಮನ್ನು ಬಿಡುಗಡೆಗೊಳಿಸಲಿಲ್ಲ. ದೇವರುಗಳು, ದೇವತೆಗಳು, ಮೇಲ್ಮಟ್ಟದ ಶಕ್ತಿಗಳು ಎಂದು ಕರೆಯುವ ಅದೃಶ್ಯ ಶಕ್ತಿಗಳ ಮೇಲಿನ ಅವಲಂಬನೆಯಿಂದಲೂ ನಮ್ಮನ್ನು ಅವರು ಬಿಡುಗಡೆಗೊಳಿಸಿದರು."

"ಮಹಾನ್ ಬೋಧಕರಾಗಿದ್ದ ಅವರ ಬೋಧನೆಗಳು, ಸಮಾನತೆ ಮತ್ತು ನಿಷ್ಪಕ್ಷಪಾತದ ಸಂದೇಶವನ್ನು ಹರಡಿದವು. ಅವರು ಸಮಾನತೆಯ ಮಹಾನ್ ಹರಿಕಾರರಾಗಿದ್ದರು."

"ಪುರೋಹಿತವರ್ಗ ಮತ್ತು ಇತರೆ ವರ್ಗಗಳ ಮಧ್ಯೆ ಎದ್ದು ಕಾಣುವ ಅಂತರವನ್ನು ಅವರು ಮೂಲೋತ್ಪಾಟನೆ ಮಾಡಿದರು. ಅತ್ಯಂತ ಕೀಳು ವರ್ಗದವರು ಎಂದು ಕರೆಯಲ್ಪಡುವವರು ಸಹ ಅತ್ಯುನ್ನತ ಸಾಧನೆಗಳನ್ನು ಮಾಡುವ ಯೋಗ್ಯತೆಯನ್ನು ಸಮಾನವಾಗಿ ಹೊಂದಿದ್ದಾರೆ".

ನನಗೆ, ಬುದ್ಧರ ಹಿರಿಮೆ ನಿರ್ವಿವಾದವಾಗಿತ್ತು. ಸಮಕಾಲೀನ ಸಮಾಜದಲ್ಲಿ ಪ್ರಚಲಿತವಿದ್ದ ಕುರುಡು ನಂಬಿಕೆಗಳನ್ನು ಅವರು ತೊಲಗಿಸಿದ್ದರು. ಮತ್ತು ಜನರನ್ನು ಅವರು ಸ್ವಾವಲಂಬಿಗಳನ್ನಾಗಿ ಮತ್ತು ಅರಿವಿನಿಂದಿರುವಂತೆ ಮಾಡಿದರು. ಪಕ್ಷಪಾತ ಮಾಡುತ್ತಿದ್ದ ಮತ್ತು ಬಡವರನ್ನು ದಮನ ಮಾಡುತ್ತಿದ್ದ ಜಾತಿ ಆಧಾರಿತ ಶ್ರೇಣಿ ವ್ಯವಸ್ಥೆಯನ್ನು ನಿರ್ಮೂಲ ಮಾಡಲು ಸಹ ಅವರು ಗಂಭೀರವಾದ ಪ್ರಯತ್ನಗಳನ್ನು ಮಾಡಿದರು. ತಮ್ಮ ಮನಸ್ಸುಗಳನ್ನು ಸ್ಫಟಿಕದ ಮಟ್ಟಕ್ಕೆ ಶುದ್ಧಿ ಮಾಡಿಕೊಳ್ಳುವುದನ್ನು ಜನರಿಗೆ ಬೋಧಿಸಿದರು. ಜಗತ್ತಿನಾದ್ಯಂತ ಅವರು ಗೌರವಿಸಲ್ಪಟ್ಟದ್ದು ಆಶ್ಚರ್ಯವೇನಲ್ಲ. ಇದೆಲ್ಲದರ ಹೊರತಾಗಿಯೂ, ಅವರ ಬೋಧನೆಗಳಲ್ಲಿ ಅಂತರ್ಗತವಾದ ನ್ಯೂನತೆಯಿದೆ ಎಂದು ಸ್ವಾಮಿ ವಿವೇಕಾನಂದರು ಭಾವಿಸಿದ್ದರಿಂದ ಅವರು ಈ ರೀತಿ ಹೇಳಿದರು.

"ನನ್ನ ಜೀವನ ಪರ್ಯಂತ ನಾನು ಬುದ್ಧರನ್ನು ಗೌರವಾದರಗಳಿಂದ ಮೆಚ್ಚಿದ್ದೇನೆ, ಆದರೆ ಅವರ ಬೋಧನೆಗಳನ್ನಲ್ಲ"

ಬುದ್ಧರ ಬೋಧನೆಗಳ ಬಗೆಗೆ ನಾನು ಹೊಂದಿದ್ದ ತಪ್ಪು ಅಭಿಪ್ರಾಯಗಳನ್ನು ಈ ಮಾತುಗಳು ಇನ್ನೂ ಗಟ್ಟಿಗೊಳಿಸಿದವು. ನಾನು ಗಾಢವಾಗಿ ಗೌರವಿಸುತ್ತಿದ್ದ ವ್ಯಕ್ತಿಯು ಅಭಿವ್ಯಕ್ತಿಗೊಳಿಸಿದ ಅನುಮಾನಗಳು, ನಾನು ನನ್ನ ಪ್ರಥಮ ವಿಪಶ್ಯನ ಧ್ಯಾನ ಶಿಬಿರದಲ್ಲಿ ಭಾಗವಹಿಸಿ ಬುದ್ಧರ ಬೋಧನೆಗಳ ಪರಿಶುದ್ಧ ಮತ್ತು ಪ್ರಾಯೋಗಿಕ ಅಂಶವನ್ನು ಸ್ವಂತ ಅನುಭವಿಸುವವರೆಗೆ ನನ್ನ ಹೃದಯದಲ್ಲಿ ತೀವ್ರವಾಗಿ ಪ್ರತಿಧ್ವನಿಸಿದವು. ನಂತರ ನಾನು ಬುದ್ಧರ ಬೋಧನೆಗಳ ಬಗ್ಗೆ ಸಂಶೋಧನೆ ಕೈಗೊಂಡೆ ಮತ್ತು ಅವು ಎಷ್ಟೊಂದು ನಿಷ್ಕಳಂಕ ಮತ್ತು ದೋಷರಹಿತ ಎಂಬುದನ್ನು ಕಂಡೆ. ಈಗ ನನ್ನ ಮನಸ್ಸು ಅನುಮಾನಗಳಿಂದ ಮುಕ್ತವಾಗಿದೆ.

(ಗೋಯಂಕಾಜಿಯವರ ಆತ್ಮಕಥನದಿಂದ)

ಮುಂದುವರೆಯುವುದು.....

## ಮಕ್ಕಳ ಪ್ರಶ್ನೆಗಳಿಗೆ ಗೋಯಂಕಾಜಿಯವರ ಉತ್ತರ
## (ಜೂನ್, 2020ರ ಸಂಚಿಕೆಯಿಂದ ಮುಂದುವರೆದಿದ್ದು)

**ಪ್ರಶ್ನೆ : ತಮಾಷೆಗಾಗಿಯೂ ಶೀಲವನ್ನು ಮುರಿಯುವುದು ಏಕೆ ಸರಿಯಲ್ಲ?**

**ಗೋಯಂಕಾಜಿ :** ನೀವು ಅನೈತಿಕವಾಗಿ ನಡೆದುಕೊಳ್ಳದೇ ಇರುವಂತಹ ಲೆಕ್ಕವಿಲ್ಲದಷ್ಟು ತಮಾಷೆಗಳಿರಬಹುದು. ನೀವು ಒಮ್ಮೆ ಶೀಲವನ್ನು ಮುರಿದರೆ, ತಮಾಷೆಗಾಗಿ ಆದರೂ, ಅದನ್ನು ಪದೇ ಪದೇ ಮಾಡುವ ಆಕರ್ಷಣೆಗೊಳಗಾಗುತ್ತೀರಿ. ಅದನ್ನು ಮಾಡುವುದರಲ್ಲಿ ನೀವು ಸಮಜಾಯಿಷಿಯನ್ನು ಹುಡುಕುತ್ತೀರಿ. ಯಾವುದೇ ಸಂದರ್ಭದಲ್ಲಿ ಶೀಲವನ್ನು ಮುರಿಯುವುದು ತಪ್ಪು. ಆದ್ದರಿಂದ, ತಮಾಷೆಗಾಗಿಯೂ ಸುಳ್ಳು ಹೇಳದಿರುವ ಪ್ರಯತ್ನವನ್ನು ವ್ಯಕ್ತಿಯು ಮಾಡಬೇಕು.

**ಪ್ರಶ್ನೆ : ಒಳ್ಳೆಯ ಉದ್ದೇಶಕ್ಕಾಗಿ ಸುಳ್ಳು ಹೇಳಿದರೂ ಅದು ಅನಾರೋಗ್ಯಕರವಾದ ಕ್ರಿಯೆ ಆಗುತ್ತದೆಯೇ?**

**ಗೋಯಂಕಾಜಿ :** ಒಂದು ಕೆಟ್ಟ ಕ್ರಿಯೆಯು, ಎಲ್ಲಾ ಸಂದರ್ಭಗಳಲ್ಲಿ ಕೆಟ್ಟ ಫಲಗಳನ್ನು ತರುತ್ತದೆ. ಮೊಟ್ಟ ಮೊದಲನೆಯದಾಗಿ, ಯಾವ ಕಾರಣಕ್ಕಾಗಿ ನೀವು ಸುಳ್ಳು ಹೇಳಿದಿರೋ ಆ ಕಾರಣ ಸರಿಯಾದುದು ಎಂದು ಹೇಗೆ ಖಡಾಖಂಡಿತವಾಗಿ ಹೇಳುತ್ತೀರಿ? ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಪ್ರತಿಯೊಬ್ಬರೂ ಮಿತಿಗಳನ್ನು ಹೊಂದಿದ್ದಾರೆ. ನಂತರ, ಮೇಲ್ನೋಟಕ್ಕೆ ಒಳ್ಳೆಯದೆಂದು ತೋರುವ ಮತ್ತೊಂದು ಕಾರಣಕ್ಕೆ ನೀವು ಸುಳ್ಳು ಹೇಳುತ್ತೀರಿ. ಎಂದೆಂದಿಗೂ ಸುಳ್ಳು ಹೇಳುವ ಚಟಕ್ಕೆ ಬಲಿಯಾಗಬೇಡಿ. ಸತ್ಯವನ್ನು ಮಾತ್ರ ಹೇಳಿ.

**ಪ್ರಶ್ನೆ : ನಾವು ಶೀಲವನ್ನು ಮುರಿದರೆ, ಅದನ್ನು ನಾವು ತಿದ್ದಿಕೊಳ್ಳುವುದು ಹೇಗೆ?**

**ಗೋಯಂಕಾಜಿ :** ನಿಮ್ಮ ತಪ್ಪುಗಳನ್ನು ಮುಚ್ಚಿಡಬೇಡಿ. ನೀವು ನಿಮ್ಮ ತಪ್ಪುಗಳನ್ನು ಮುಚ್ಚಿಟ್ಟರೆ, ಅದನ್ನು ಪುನರಾವರ್ತಿಸುತ್ತೀರಿ. ಅದೊಂದು ಕೊನೆಯಿಲ್ಲದ ಪ್ರಕ್ರಿಯೆಯಾಗುತ್ತದೆ. ನೀವು ಗೌರವಿಸುವ ಒಬ್ಬ ಹಿರಿಯರ ಮುಂದೆ ತಪ್ಪೊಪ್ಪಿಕೊಂಡು ಮತ್ತು ಅದೇ ತಪ್ಪನ್ನು ಯಾವುದೇ ಸಂದರ್ಭದಲ್ಲಿ ಮತ್ತೊಮ್ಮೆ ಮಾಡುವುದಿಲ್ಲ ಎಂದು ಪ್ರಮಾಣ ಮಾಡಿ, ನಿಮ್ಮ ಮನಸ್ಸು ಶಕ್ತಿ ಗಳಿಸಿಕೊಳ್ಳುತ್ತದೆ. ನಿಮ್ಮ ಕೆಟ್ಟ ಕ್ರಿಯೆಗಳನ್ನು ನೀವು ಮುಚ್ಚಿಡದಿದ್ದರೆ, ಅವುಗಳನ್ನು ನೀವು ಪುನರಾವರ್ತಿಸುವ ಆಕರ್ಷಣೆಗೊಳಗಾಗುವುದಿಲ್ಲ.

**ಪ್ರಶ್ನೆ : ನಾವು ಏಕೆ ಸಿಗರೇಟು ಸೇದಬಾರದು ಅಥವಾ ಮದ್ಯಪಾನ ಮಾಡಬಾರದು ಅಥವಾ ಮಾದಕ ವಸ್ತುಗಳನ್ನು ಸೇವಿಸಬಾರದು?**

**ಗೋಯಂಕಾಜಿ :** ಸ್ವಲ್ಪ ತೆಗೆದುಕೊಂಡರೆ ಹಾನಿಕಾರಕವಲ್ಲ, ಅದು ಸುಖ ಕೊಡುತ್ತದೆ ಎಂದು ಧೂಮಪಾನ ಮಾಡಲು ಅಥವಾ ಮಾದಕ ವಸ್ತುಗಳನ್ನು ಸೇವಿಸಲು ಯಾರಾದರೂ ನಿಮ್ಮನ್ನು ಪ್ರೇರೇಪಿಸಬಹುದು. ನೀವು ದುರ್ಬಲಗೊಂಡು, ಸ್ವಲ್ಪ ಪ್ರಮಾಣದ ಸೇವನೆಯಿಂದ ಆರಂಭಿಸಬಹುದು. ಕ್ರಮೇಣವಾಗಿ ನೀವು ಚಟಕ್ಕೊಳಗಾಗುತ್ತೀರಿ. ಅದು ವಾಸಿಮಾಡಲಾರದ ಕಾಯಿಲೆಯ ತರಹ. ನಿಮ್ಮ ಆಪ್ತಸ್ನೇಹಿತ ಕೇಳಿದರೂ ನೀವು ಮದ್ಯಪಾನ ಮಾಡಬೇಡಿ ಅಥವಾ ಧೂಮಪಾನ ಮಾಡಬೇಡಿ ಅಥವಾ ಮಾದಕ ವಸ್ತು ಮುಂತಾದವುಗಳನ್ನು ಸೇವಿಸಬೇಡಿ.

**ಪ್ರಶ್ನೆ : ಈ ಪೈಪೋಟಿಯ ಜಗತ್ತಿನಲ್ಲಿ ಅಪ್ರಾಮಾಣಿಕರಾಗದೇ ನಾವು ಯಶಸ್ಸನ್ನು ಗಳಿಸಲು ಹೇಗೆ ಸಾಧ್ಯ?**

**ಗೋಯಂಕಾಜಿ :** ನಾವು ಅಪ್ರಾಮಾಣಿಕರಾದರೆ ಮಾತ್ರ ಯಶಸ್ವಿಗಳಾಗಲು ಸಾಧ್ಯ ಎಂಬುದು ದುರ್ಬಲ ಮನಸ್ಸಿನ ಆಲೋಚನೆ. ಈ ಧ್ಯಾನ ಸಾಧನೆಯು ಎಷ್ಟೊಂದು ಗಟ್ಟಿಗೊಳಿಸುತ್ತದೆ ಎಂದರೆ ನೀವು ಅಪ್ಪಿತಪ್ಪಿಯೂ ನಿಮ್ಮ ಶೀಲಭಂಗ ಮಾಡಿಕೊಳ್ಳುವುದಿಲ್ಲ ಅಥವಾ ತಪ್ಪುದಾರಿಗಳನ್ನು ಅನುಸರಿಸುವುದಿಲ್ಲ. ಆದರೆ ಯಶಸ್ಸು ನಿಮ್ಮ ಬಾಗಿಲಲ್ಲಿಯೇ ಇರುತ್ತದೆ.

ನೀವು ಬೆಳೆದು ದೊಡ್ಡವರಾದಂತೆ, ಇನ್ನೂ ಹೆಚ್ಚಿನದನ್ನು ಅರ್ಥ ಮಾಡಿಕೊಳ್ಳುತ್ತೀರಿ. ವಾಮಮಾರ್ಗದಿಂದ ಹೆಸರು, ಪ್ರಸಿದ್ಧಿ, ಅಂತಸ್ತು ಮತ್ತು ಆಸ್ತಿಗಳಿಸಿರುವವರು ಯಶಸ್ವಿ ಜೀವನ ನಡೆಸುತ್ತಿದ್ದಾರೆ ಎಂದು ಮೇಲ್ನೋಟಕ್ಕೆ ಅನಿಸಬಹುದು. ವಾಸ್ತವವಾಗಿ ಅವರು ತಳಮಳ ಮತ್ತು ದುಃಖದಿಂದ ತುಂಬಿರುತ್ತಾರೆ. ಅಂತಹ ವ್ಯಕ್ತಿಯು ರಾತ್ರಿ ಹೊತ್ತು ವಿಶ್ರಾಂತಿಯುತವಾದ ನಿದ್ರೆ ಮಾಡುವುದಿಲ್ಲ ಮತ್ತು ಹಗಲು ಹೊತ್ತು ಶಾಂತಿಯಿಂದಿರುವುದಿಲ್ಲ. ಇನ್ನೊಂದು ಕಡೆಯಲ್ಲಿ, ಅಷ್ಟೇನೂ ಶ್ರೀಮಂತನಲ್ಲದ ಅಥವಾ ಪ್ರಸಿದ್ಧನಲ್ಲದ ಆದರೆ ಹೃದಯದಲ್ಲಿ ತೃಪ್ತಿ ಮತ್ತು ಕರುಣೆಯನ್ನು ಹೊಂದಿರುವ ವ್ಯಕ್ತಿಯು ನಿಜವಾಗಿಯೂ ಶ್ರೇಷ್ಠ ವ್ಯಕ್ತಿ ಮತ್ತು ನಿಜವಾಗಿಯೂ ಸುಖದ ಜೀವನ ನಡೆಸುತ್ತಾನೆ. ಯಾವುದೇ ಬೆಲೆ ತೆತ್ತರೂ ನೀವು ತಪ್ಪು ದಾರಿ ಹಿಡಿಯಬಾರದು

**RNI. No. : KARKAN/2015/68727. Postal Regn. No.: RNP/KA/BGS/2253/2020-22**
**Published On 10th & Posted On 20th of every Month. Posted At : Bengaluru PSO, B'luru 26. Price(Annual)Rs.30.**

ಎಂಬ ಕಾರಣಕ್ಕಾಗಿಯೇ ನೀವು ಈ ಚಿಕ್ಕವಯಸ್ಸಿನಲ್ಲಿಯೇ ಧ್ಯಾನ ಮಾಡುವುದನ್ನು ಕಲಿಯುತ್ತಿದ್ದೀರಿ. ಸರಿಯಾದ ಗುರಿ ತಲುಪುವುದಕ್ಕಾಗಿಯು ಸಹ, ತಪ್ಪು ದಾರಿಯಲ್ಲಿ ನಡೆಯಬೇಡಿ. ನೈತಿಕವಾಗಿ ಸರಿಯಾದ ಗುರಿಗಾಗಿ ಯಾವಾಗಲೂ ಒಳ್ಳೆಯ ಮಾರ್ಗವನ್ನು ಹಿಡಿಯಿರಿ. (ಗ್ಲೋಬಲ್ ಪಗೋಡ ಸುವನೀರ್, ಪುಟ 38–40)

**ಧಮ್ಮ ಪಫುಲ್ಲ, ವಿಪಶ್ಯನ ಧ್ಯಾನ ಕೇಂದ್ರ, ಬೆಂಗಳೂರು.**

**ಪ್ರೀತಿಯ ಧ್ಯಾನ ಸಾಧಕರೆ,**

ತಾವೆಲ್ಲರೂ ಆರೋಗ್ಯದಿಂದ ಇದ್ದೀರೆಂದು ನಂಬಿದ್ದೇವೆ.

ಕಳೆದ ಕೆಲವು ತಿಂಗಳುಗಳು ಬೆಲೆಕಟ್ಟಲಾಗದ ಧರ್ಮ ರತ್ನದ ನಿಜವಾದ ಮೌಲ್ಯವೇನು ಎಂಬುದನ್ನು ನಮಗೆ ತೋರಿಸಿವೆ. ನಮ್ಮ ಜೀವನದಲ್ಲಿ ಧರ್ಮವನ್ನು ಪಡೆದ ನಾವು ಅದೃಷ್ಟವಂತರು. ಗಟ್ಟಿಯಾಗಿ ನೆಲೆನಿಂತು ಸಹನೆಯಿಂದಿರಲು ಮತ್ತು ನಮ್ಮ ಸುತ್ತಮುತ್ತಲಿನ ಪರಿಸ್ಥಿತಿಗಳು ಮತ್ತು ಜನರಿಗೆ ನಿಯಂತ್ರಿತ ಪ್ರತಿವರ್ತನೆ ತೋರಲು ಇದು ನಮಗೆ ಸಹಾಯ ಮಾಡಿದೆ. ಅತಿರೇಕದ ಪರಿಸ್ಥಿತಿಯನ್ನು ಸ್ವಾಭಾವಿಕವಾಗಿ ಸ್ವೀಕರಿಸಿ, ಅಶಾಶ್ವತ ನಿಯಮವನ್ನು ಅರಿಯುತ್ತಾ ಸಮತೆಯಿಂದಿರುವುದು ನಮಗೆ ವ್ಯಕ್ತವಾಗಿದೆ.

ಶಾಂತಿಯುತ ಜೀವನಕ್ಕೆ ಅತ್ಯಾವಶ್ಯಕವಾಗಿ ಬೇಕಾದ ಈ ಗುಣಗಳನ್ನು ಬೆಳಸಿಕೊಳ್ಳುವುದಕ್ಕಾಗಿ ಇರುವ ಒಂದೇ ದಾರಿ ಎಂದರೆ, ವಿಪಶ್ಯನ ಧ್ಯಾನ ಕೇಂದ್ರಗಳು ನಡೆಸುವ ಶಿಬಿರದಲ್ಲಿ ಭಾಗವಹಿಸುವುದು. ತಮ್ಮಂತಹ ಹಳೆಯ ಧ್ಯಾನ ಸಾಧಕರ ಕೃತಜ್ಞತಾಪೂರ್ವಕವಾದ ನಿಸ್ವಾರ್ಥ ದಾನ ಮತ್ತು ದೃಢವಾದ ನಿರಂತರ ಸೇವೆಯಿಂದ ಪ್ರತಿಯೊಂದು ಧ್ಯಾನ ಕೇಂದ್ರವೂ ಅನೇಕ ವರ್ಷಗಳ ಕಾಲ ಸ್ವಲ್ಪ ಸ್ವಲ್ಪವಾಗಿ, ಹಂತ ಹಂತವಾಗಿ ಕಟ್ಟಲ್ಪಟ್ಟಿದೆ.

ಶಿಬಿರಗಳು ನಡೆಯದೇ ಇದ್ದ ಲಾಕ್ ಡೌನ್ ಅವಧಿಯಲ್ಲಿ, ಧಮ್ಮ ಪಫುಲ್ಲದಲ್ಲಿ, ಶಿಬಿರಗಳನ್ನು ನಡೆಸಲು ಬೇಕಾದ ಅತ್ಯುತ್ತಮ ಸೌಕರ್ಯಗಳನ್ನು ಸೃಷ್ಟಿಸಲು ಹಲವಾರು ದುರಸ್ತಿ ಕೆಲಸಗಳನ್ನು ಮತ್ತು ವಿಸ್ತರಣಾ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ಹಸಿರನ್ನು ಹೆಚ್ಚಿಸುವುದಕ್ಕಾಗಿ ವಿವಿಧ ರೀತಿಯ ಮರದ ಸಸಿಗಳನ್ನು ನೆಡಲಾಗಿದೆ.

ಕೇಂದ್ರದಲ್ಲಿ ಲಭ್ಯವಿಲ್ಲದಿರುವ ಒಂದು ಸೌಕರ್ಯವೆಂದರೆ, ಧ್ಯಾನದ ಪ್ರತ್ಯೇಕ ಧ್ಯಾನಕೋಶಗಳು (ಕಿರುಕೊಠಡಿಗಳು) (Individual Meditation Cells). ಶಿಬಿರಾರ್ಥಿಗಳು ಏಕಾಂತವಾಗಿ ಧ್ಯಾನ ಮಾಡಲು ಮತ್ತು ಕರ್ನಾಟಕದಲ್ಲಿ ಧೀರ್ಘ ಶಿಬಿರಗಳನ್ನು ಆಯೋಜಿಸಲು ಇದರ ಅವಶ್ಯಕತೆ ಇತ್ತು.

ಮಿತವ್ಯಯದ ಮತ್ತು ಬಹಳ ಉಪಯುಕ್ತವಾದ ರೀತಿಯಲ್ಲಿ 128 ಧ್ಯಾನ ಕೋಶಗಳನ್ನು ನಿರ್ಮಿಸುವ ಯೋಜನೆಯನ್ನು ಕಳೆದ ವರ್ಷ ಪ್ರಾರಂಭಿಸಲಾಯಿತು. ಪ್ರತಿಯೊಂದು ಸಂವಾದದಲ್ಲಿ ಧ್ಯಾನಾರ್ಥಿಗಳು ಇದರ ಪ್ರಗತಿ ಮತ್ತು ಪೂರ್ಣಗೊಳ್ಳುವ ಸಮಯದ ಬಗ್ಗೆ ವಿಚಾರಿಸುತ್ತಿರುತ್ತಾರೆ. ಇದುವರೆಗೆ ಇಡೀ ಕಟ್ಟಡದ ಅಡಿಪಾಯ ಪೂರ್ಣಗೊಂಡಿದೆ ಮತ್ತು 48 ಧ್ಯಾನ ಕೋಶಗಳ ಹೊರ ವರ್ತುಲದ ಕೆಲಸ ಪ್ರಗತಿಯಲ್ಲಿದೆ. ಲಭ್ಯವಿರುವ ಸಂಪನ್ಮೂಲಗಳು ಕೆಲವು ವಾರಗಳಿಗೆ ಮಾತ್ರ ಸಾಕಾಗುತ್ತವೆ ಎಂದು ಅಂದಾಜಿಸಲಾಗಿದೆ. ಆ ನಂತರ ನಿರ್ಮಾಣದ ಕೆಲಸವನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಗಬಹುದು.

ಕೇಂದ್ರದಲ್ಲಿ ಶಿಬಿರಗಳನ್ನು ಮತ್ತೆ ಶುರುಮಾಡಲು ಪರಿಸ್ಥಿತಿಯು ಅವಕಾಶ ಕೊಡುವುದನ್ನೇ ನಾವು ಕಾಯುತ್ತಿದ್ದೇವೆ. ಈ ಮಧ್ಯೆ ನೀವೆಲ್ಲರೂ ಪಾರಮಿಗಳನ್ನು ಗಳಿಸಿಕೊಳ್ಳುವುದಕ್ಕಾಗಿ ನಿಮ್ಮ ಸಮಯ ಮತ್ತು ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳಿ ಮತ್ತು ಧರ್ಮದಲ್ಲಿ ಬೆಳೆಯಿರಿ ಎಂದು ಹಾರೈಸುತ್ತೇವೆ.

ಅಪರಿಮಿತ ಮೈತ್ರಿಯೊಂದಿಗೆ,

ನಿರ್ವಾಹಕ ಟ್ರಸ್ಟಿಗಳು,
ಧಮ್ಮ ಪಫುಲ್ಲ, ಬೆಂಗಳೂರು.

**ಬ್ಯಾಂಕಿನ ಖಾತೆಯ ವಿವರಗಳು :**

| | | |
|---|---|---|
| ಖಾತೆಯ ಹೆಸರು | : | VIPASSANA MEDITATION AND RESEARCH CENTRE. |
| ಖಾತೆ ಸಂಖ್ಯೆ | : | 5572500100076701 |
| ಖಾತೆ | : | ಉಳಿತಾಯ ಖಾತೆ |
| ಬ್ಯಾಂಕ್ | : | ಕರ್ನಾಟಕ ಬ್ಯಾಂಕ್ |
| IFSC Code | : | KARB0000557 |
| ಶಾಖೆ | : | ನೆಲಮಂಗಲ, ಬೆಂಗಳೂರು |

ದಾನದ ಮೊತ್ತವು ಸೆಕ್ಷನ್ 80 ಜಿ ಅಡಿಯಲ್ಲಿ 50% ತೆರಿಗೆ ರಿಯಾಯಿತಿ ಹೊಂದಿದೆ.

ದಾನದ ರಶೀದಿಗಾಗಿ ಈ ಕೆಳಗಿನ ಮಾಹಿತಿಯನ್ನು ಇ–ಮೇಲ್ ಮಾಡಿ.

* ಹೆಸರು
* ಪಾನ್ ಸಂಖ್ಯೆ
* ಅಂಚೆ ವಿಳಾಸ
* ಸಂಪರ್ಕ ಮೊಬೈಲ್ ಸಂಖ್ಯೆ
* ಇ–ಮೇಲ್ ವಿಳಾಸ
* ಹಣ ವರ್ಗಾವಣೆಯ ವಿವರಗಳು

email : info@paphulla.dhamma

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು: ಬಿ.ಪ್ರದೀಪ ಕುಮಾರ, ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070.

**ಗೌರವ ಸಂಪಾದಕರು: ಜಿ.ಟಿ. ಗೋವಿಂದಪ್ಪ**

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

**ಮುದ್ರಿತ ವಿಷಯ** ತೆರೆದ–ಅಂಚೆ

ಗೆ,

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.